ಅಹಮಿಕೆಯನ್ನು ಸರಿಸಿ ವಿಶಾಲ ದೃಷ್ಟಿಯಿಂದ ನೋಡಬಹುದಿತ್ತು. ಅವಳು ನೌಕರಿ ಮಾಡುವುದೇ ಪಾಪ ಎನ್ನುವಂತೆ ನಾನು ನೋಡಿದ್ದಾದರೂ ಏಕೋ? ಬದಲಿಗೆ ನಾನು ಮಾಡಿದ್ದ ಘನಕಾರ್ಯವಾದರೂ, ಅರಿಯದ ಹಸುಳೆಯನ್ನು ಎತ್ತಿಕೊಂಡು ಬಂದು ಪಾಠ ಕಲಿಸುವ ಹುನ್ನಾರ! ಛಿ, ನನಗೆ ನನ್ನ ಮೇಲೆ ಅಸಹ್ಯವಾಯಿತು. ಅದೊಂದು ದೊಡ್ಡ ಸಾಧನೆಯೇ? ಮಗುವಿಗೆ ಮಾತೃಪ್ರೇಮದಿಂದ ವಂಚಿಸುವ ಹಕ್ಕನ್ನು ನನಗೆ ಕೊಟ್ಟಿದ್ದಾದರೂ ಯಾರು? ಅದು ದೌರ್ಜನ್ಯವಲ್ಲವೇ? ಒಂದುವೇಳೆ ನಾನೊಬ್ಬನೇ ದೂರದ ಊರಿಗೋ ವಿದೇಶಕ್ಕೋ ಹೋಗುವ ಪ್ರಮೇಯವಿದ್ದಿದ್ದರೆ ಸಂಸಾರದಿಂದ ದೂರ ಇರುತ್ತಿರಲಿಲ್ಲವೇ? ತೇಜು ಮಾಸ್ಟರ್ಸ್ ಮಾಡಲು ಉತ್ತರಪ್ರದೇಶಕ್ಕೆ ಹೋದಾಗ... ಮಗಳನ್ನು ಬಿಟ್ಟಿರಲಿಲ್ಲವೆ? ನಾನೊಬ್ಬನೇ ಇರಲಿಲ್ಲವೇ? ಅಲ್ಲಿಂದ ಮುಂದುವರೆದು ನೌಕರಿ... ಮದುವೆಯಾದ ಮೇಲಂತೂ ಶಾಶ್ವತವಾಗಿ.

ನಾನೇ ಸ್ವಲ್ಪ ಅನುಸರಿಸಿಕೊಂಡು ಹೋಗಿದ್ದರೆ ಆಗಿತ್ತು. ನನಗಿರುವ ಪ್ರಭಾವ ಬಳಸಿ ಎರಡು ವರ್ಷಕ್ಕೆ ವರ್ಗ ಮಾಡಿಸಬಹುದಿತ್ತು. ದಸರೆ ಬೇಸಿಗೆಗಳಲ್ಲಿ ಒಟ್ಟಿಗೆ ಕಳೆದರೂ, ಇನ್ನುಳಿದದ್ದು ಹೇಗೋ ನಡೆಯುತ್ತಿತ್ತು. ನನಗೆ ದಾಂಪತ್ಯದ ನಿರಾಸೆ ಹೆಚ್ಚಾಗಿ ಕಂಡದ್ದು ನಿಜ, ಆದರೆ ಮಗುವನ್ನು ಅಮ್ಮನ ಪ್ರೀತಿಯಿಂದ ವಿಮುಖನಾಗಿಸಿದ್ದು ಅಕ್ಷಮ್ಯವೇ ಸರಿ. ಒಂದುವೇಳೆ ಅವಳೂ ನನ್ನಮೇಲೆ ಸಾಧಿಸಲು ಮಗುವಿಗಾಗಿ ಕೋರ್ಟ್ ಮೆಟ್ಟಲು ಹತ್ತಿದ್ದರೆ? ಹೆಣ್ಣುಮಗುವಾದ್ದರಿಂದ ಮಗು ಅವಳಲ್ಲಿಯೇ ಬೆಳೆಯುವ ಅವಕಾಶವಿತ್ತಲ್ಲ? ಅವಳ ಪರವಾಗಿ ತೀರ್ಪು ಬರುವ ಸಾಧ್ಯತೆಯೂ ಇರುತ್ತಿತ್ತು. ಹಾಗೆ ನೋಡಿದರೆ, ಅವಳೇ ನನಗೆ ಉಪಕಾರ ಮಾಡಿದ್ದಾಳೆ, ಮಗುವಿಗೆ ಅಪ್ಪನ ಪ್ರೀತಿ ಸಿಗಲಿ ಎಂಬ ಹಿರಿದಾಸೆಯಿಂದ, ಜೊತೆಗೆ ಕೋರ್ಟು ಕೇಸು ಎಂಬ ತಲೆಬಿಸಿ ಕೊಟ್ಟಿಲ್ಲ. ಅವಳು ಸೋತು ಗೆದ್ದಿದ್ದಳು – ನಾನು ಗೆದ್ದು ಸೋತಿದ್ದೆ. ನಾನು ದೊಡ್ಡ ತಪ್ಪು ಮಾಡಿದ್ದೆ. 'ಸುಭದ್ರಾ ಐ ಯಾಮ್ ಸಾರಿ' ನನಗೆ ನಾನೇ ಹೇಳಿಕೊಂಡೆ. 'ದೇವರೇ, ತಪ್ಪು ತಿದ್ದಿಕೊಳ್ಳುವ ಅವಕಾಶ ಕೊಡು' ಮನದಲ್ಲೇ ಪ್ರಾರ್ಥಿಸಿದೆ. ಪಶ್ಚಾತ್ತಾಪ ಕಣ್ಣೀರಾಗಿ ಹರಿದಿತ್ತು.

★★★

ಶರ್ಮರ ಐದು ತಿಂಗಳ ಮೊಮ್ಮಗುವನ್ನು ಎತ್ತಿಕೊಂಡಾಗ ಮತ್ತೆ ತೇಜು ನೆನಪಾದಳು. 'ಇನ್ನು ಕೆಲವೇ ವಾರಗಳಲ್ಲಿ ನಮ್ಮ ಮನೆಗೂ ಹೀಗೊಂದು ಪುಟ್ಟ ಕಂದನ ನಿರೀಕ್ಷೆಯಿದೆ' ಎಂದು ಸಂಭ್ರಮಿಸಿದೆ. ವಯಸ್ಸಿನಲ್ಲಿ ನನಗಿಂತ ಹಿರಿಯರಾದ ಶರ್ಮ, 'ಒಳ್ಳೇದಾಗುತ್ತೆ ಸರ್, ನಿಮಗೆ ಯಾವುದೇ ಸಹಾಯ ಬೇಕಿದ್ದರೂ ಮಾಡ್ತೀವಿ, ಈಗಷ್ಟೇ ಅನುಭವವಾಗಿದೆಯಲ್ಲ' ಎಂದಾಗ ಸ್ವಲ್ಪ ಧೈರ್ಯ ಬಂದಂತಾಯ್ತು.

'ಅಂದ್ಹಾಗೆ ನಿಮ್ಮ ಮನೆ ಔಟ್ ಹೌಸ್ ಇನ್ನೂ ಖಾಲಿ ಇದೆಯೇ ಸರ್?'

'ಹೌದು, ನಮಗೆ ಒಗ್ಗೋ ಅಂಥವರು ಸಿಕ್ಕರೆ ಕೊಡೋದು ಅಂತ ಕಾಯ್ತಿದ್ದೀನಿ, ಅವಸರವೇನಿಲ್ಲ... ನಿಮಗೆ ಯಾರಾದ್ರೂ ತಿಳಿದವರು ಇದ್ದಾರಾ?' ಕುತೂಹಲದಿಂದ ಕೇಳಿದೆ.

'ಹೂಂ, ನಿನ್ನೆ ತೊಟ್ಟಿಲು ಕಾರ್ಯಕ್ರಮಕ್ಕೆ ಬಂದಿದ್ದ ನನ್ನ ಹೆಂಡತಿಯ ಕಡೆಯವರು ವಿಚಾರಿಸ್ತಿದ್ದರು. ತಾಯಿ ಮಗಳು ಇಬ್ಬರೇ ಇರೋದು, ನಮ್ಮ ಬಡಾವಣೆಯಲ್ಲಿ ಮನೆ ಇದ್ದರೆ ಬೇಕಿತ್ತು ಅಂತ ಹೇಳಿದ್ರಂತೆ' ಎಂದಾಗ, 'ಆಗಲಿ, ಅದಕ್ಕೇನಂತೆ, ನಿಮ್ಮ ಕಡೆಯವರು ಅಂದರೆ ಮುಗೀತು, ಸಂಜೆ ಮೇಲೆ ಮನೇಲೆ ಇರ್ತೀನಿ. ಇವತ್ತೇ ಬಂದರೂ ಪರವಾಗಿಲ್ಲ' ಎಂದು ಹೇಳುವುದನ್ನು ಮರೆಯಲಿಲ್ಲ.

ಸಂಜೆ ನಾಲ್ಕರ ಹೊತ್ತಿಗೆ ಶರ್ಮ ಕರೆ ಮಾಡಿ ಮನೆ ನೋಡಲು ಇನ್ನೊಂದು ಅರ್ಧಗಂಟೆಯಲ್ಲಿ ತಮ್ಮ ಮಗ ನಕುಲನ ಜೊತೆ ಬರುತ್ತಿರುವುದಾಗಿ ತಿಳಿಸಿದಾಗ, ಬಂದವರಿಗೆ ಕನಿಷ್ಠ ಕಾಫಿ ಕೊಡದಿದ್ದರೆ ಸೌಜನ್ಯವಲ್ಲ ಎಂದು ಡಿಕಾಕ್ಷನ್ ಹಾಕಿ ಹಾಲು ಕಾಯಿಸಿಟ್ಟೆ.